ಇಂದು ದಿ:11.02.2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿಕೆಎಂ ವಕೀಲರಿಂದ ಃ

1986 ರಿಂದ 2011ರ ವರೆಗೆ ನನ್ನ ಹೆಂಡತಿಯಾದ ಶ್ರೀಮತಿ ಬಿ.ಆರ್.ಗೋಪಮ್ಮರವರು ಮಿಳಿಂದ ವಿದ್ಯಾ ಸಂಸ್ಥೆಯ ಧರ್ಮದರ್ಶಿಯಾಗಿದ್ದರು. ಸರ್ಕಾರದಿಂದ ಮಿಳಿಂದ ವಿದ್ಯಾ ಸಂಸ್ಥೆಗೆ ಅನುದಾನ ಪಡೆಯಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗಿತ್ತು ಎಂದರೆ ಸರಿ. ಸರ್ಕಾರದಿಂದ ಅನುದಾನ ಪಡೆಯಲು ಮಿಳಿಂದ ವಿದ್ಯಾಸಂಸ್ಥೆಯು ಪರಿಶಿಷ್ಟ ಜಾತಿಯವರಿಂದ ಸ್ಥಾಪಿತವಾದ ವಿದ್ಯಾ ಸಂಸ್ಥೆಯಾಗಿರುತ್ತದೆಂದು ಅರ್ಜಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ಮಿಳಿಂದ ವಿದ್ಯಾ ಸಂಸ್ಥೆಯನ್ನು ಪರಿಶಿಷ್ಟ ಜಾತಿಯವರು ನಡೆಸುತ್ತಿದ್ದಾರೆ ಎಂಬ ಬಗ್ಗೆ ಅರ್ಜಿ ಸಲ್ಲಿಸಲಾಗಿತ್ತು ಎಂದರೆ ಸರಿ. ನನ್ನ ಹೆಂಡತಿ ಶ್ರೀಮತಿ ಬಿ.ಆರ್. ಗೋಪಮ್ಮರವರು ಕೊಡಗಿನ ಅರೆಭಾಷೆ ಗೌಡ ಸಮುದಾಯಕ್ಕೆ ಸೇರಿದ್ದರು ಎಂದರೆ ಸರಿ. ನನ್ನ ಹೆಂಡತಿ ಈಗಲೂ ಸಹ ಅರೆಭಾಷೆ ಗೌಡ ಸಮುದಾಯಕ್ಕೆ ಸೇರಿದವರಾಗಿರುತ್ತಾರೆಂದರೆ ಸರಿಯಲ್ಲ. ಸರ್ಕಾರದಿಂದ ಅನುದಾನ ಪಡೆಯುವ ಸಲುವಾಗಿ ನನ್ನ ಹೆಂಡತಿಯು ಪರಿಶಿಷ್ಟ ಜಾತಿಗೆ ಸೇರಿರುವುದಾಗಿ ದೃಢೀಕರಣ ಪತ್ರ ಹಾಜರುಮಾಡಿರುತ್ತೇನೆ ಎಂದರೆ ಸರಿ. ಆ ಸಂದರ್ಭದಲ್ಲಿ ನಿಮ್ಮ ಹೆಂಡತಿ ಪರಿಶಿಷ್ಟ ಜಾತಿಗೆ ಸೇರಿದ್ದಾರೆಂದು ದೃಢೀಕರಣ ಪತ್ರ ಹಾಜರು ಮಾಡಿದರೆ ಮಿಳಿಂದ ವಿದ್ಯಾ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ ಎಂದು ಈ ಪ್ರಕರಣದ ಆರೋಪಿಯು ಪ್ರತಿರೋಧಿಸಿದ್ದರು ಎಂದರೆ ಸರಿಯಲ್ಲ. ನನ್ನ ಹೆಂಡತಿ ಪರಿಶಿಷ್ಟಜಾತಿಗೆ ಸೇರಿದ್ದಾರೆಂದು ನಾನು ಹಾಜರುಮಾಡಿದ್ದ ದೃಢೀಕರಣ ಪತ್ರದ ವಿಚಾರವಾಗಿ ಜಿಲ್ಲಾಧಿಕಾರಿಗಳಿಂದ ವಿಚಾರಣೆ ಸಹ ನಡೆದಿರುತ್ತದೆ ಎಂದರೆ ಸರಿ. ನನ್ನ ಹೆಂಡತಿ ಪರಿಶಿಷ್ಟ ಜಾತಿಗೆ ಸೇರಿಲ್ಲವೆಂದು ಜಿಲ್ಲಾಧಿಕಾರಿ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಆರೋಪಿಯ ಮೇಲೆ ದ್ವೇಷ ಸಾಧಿಸಲು ಶುರು ಮಾಡಿದೆನು ಎಂದರೆ ಸರಿಯಲ್ಲ. ನಾನು ಆ ರೀತಿ ದ್ವೇಷ ಸಾಧಿಸಲು ಶುರು ಮಾಡಿದ ಫಲವಾಗಿ ನಾನು ಶಿಕ್ಷಣ ಇಲಾಖೆಗೆ ಹಾಗೂ ವಿಜಯ್‌ಕುಮಾರ್‌ರವರು ಲೋಕಾಯುಕ್ತಕ್ಕೆ ಆರೋಪಿಯ ವಿರುದ್ಧ ಪಿರ್ಯಾದಿ ಕೊಟ್ಟಿರುತ್ತೇವೆಂದರೆ ಸರಿಯಲ್ಲ. ಆರೋಪಿಯ ವಿರುದ್ಧ ನಾನು ಶಿಕ್ಷಣ ಇಲಾಖೆಗೆ ಅರ್ಜಿ ಕೊಟ್ಟಿದ್ದೆ. ಸಾಕ್ಷಿಯು ಮುಂದುವರಿದು ಅಷ್ಟೊತ್ತಿಗೆ ಆರೋಪಿಯು ಹಣ ದುರುಪಯೋಗಪಡಿಸಿಕೊಂಡಿದ್ದಾರೆಂದು ಸಾಬೀತಾಗಿದ್ದ ಕಾರಣ ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಇಲಾಖೆಗೆ ಅರ್ಜಿ ಕೊಟ್ಟಿದ್ದೆ ಎಂದು ಸ್ವಯಂ ನುಡಿಯುತ್ತಾರೆ.

ವಿಜಯ್ ಕುಮಾರ್ ಎಂಬುವರು ಪಿರಿಯಾಪಟ್ಟಣದ ಸಾಮಾಜಿಕ ಕಾರ್ಯಕರ್ತರು. ಸುಮಾರು ಹತ್ತು ವರ್ಷಗಳಿಂದ ಸದರಿ ವಿಜಯ್‌ಕುಮಾರ್ ನನಗೆ ಪರಿಚಯವಿದ್ದಾರೆ. ವಿಜಯ್‌ಕುಮಾರ್‌ರವರು

11.02.20

ಆರೋಪಿಯ ವಿರುದ್ಧ ಮಿಳಿಂದ ವಿದ್ಯಾಸಂಸ್ಥೆಗೆ ಸಂಬಂಧಿಸಿದಂತೆ ದೂರು ನೀಡಿದ ಮೊದಲಿನಿಂದಲೂ ನನಗೆ ಪರಿಚಯವಿದ್ದರು. ಆರೋಪಿಯ ವಿರುದ್ಧ ನಾನು ಶಿಕ್ಷಣ ಇಲಾಖೆಗೆ ನೀಡಿದ ದೂರು ಹಾಗೂ ವಿಜಯ್‌ಕುಮಾರ್‌ರವರು ಆರೋಪಿಯ ವಿರುದ್ಧ ಲೋಕಾಯುಕ್ತಕ್ಕೆ ನೀಡಿದ ದೂರುನ್ನು ಅಂದರೆ ಎರಡೂ ದೂರುಗಳನ್ನು ಒಟ್ಟುಗೂಡಿಸಿಕೊಂಡು ಲೋಕಾಯುಕ್ತ ಸಂಸ್ಥೆಯವರು ತನಿಖೆ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಿಜಯ್‌ಕುಮಾರ್‌ರವರ ಮೂಲಕ ಆರೋಪಿಯ ವಿರುದ್ಧ ಲೋಕಾಯುಕ್ತಕ್ಕೆ ಸುಳ್ಳು ದೂರನ್ನು ನಾನೇ ಕೊಡಿಸಿದ್ದೇನೆಂದರೆ ಸರಿಯಲ್ಲ. ಹಣ ದುರುಪಯೋಗವಾಗಿದೆ ಎಂಬ ದೂರಿನ ಕುರಿತು ಲೋಕಾಯುಕ್ತರು ಸಮಗ್ರವಾದ ತನಿಖೆ ಮಾಡಿ ಆರೋಪಿತನು ನಿರಪರಾಧಿ ಎಂದು ದಿನಾಂಕ 10.12.2015ರಂದು ತೀರ್ಪು ನೀಡಿರುತ್ತಾರೆ ಎಂದು ವಕೀಲರು ಮಾಡಿ ಸಲಹೆಗೆ ಸಾಕ್ಷಿಯು ತೀರ್ಪು ನೀಡಿರುವುದು ನಿಜ ಆದರೆ ಆರೋಪಿಯು ಈ ನ್ಯಾಯಾಲಯದಲ್ಲಿರುವ ಪ್ರಕರಣದಿಂದ ಬಚಾವಾಗುವ ಸಲುವಾಗಿ ಆರೋಪಿಯು ವಿಜಯ್‌ಕುಮಾರ್‌ರವರ ಜೊತೆಗೂಡಿ ಷಡ್ಯಂತರ ಮಾಡಿದ ಪರಿಣಾಮವಾಗಿ ಆ ತೀರ್ಪು ಬಂದಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಲೋಕಾಯುಕ್ತರು ನೀಡಿರುವ ತೀರ್ಪಿನ ವಿರುದ್ಧ ನಾನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ಆರೋಪಿ ಮತ್ತು ವಿಜಯ್‌ಕುಮಾರ್‌ರವರು ಪರಸ್ಪರ ಶಾಮೀಲಾಗಿ ಷಡ್ಯಂತರ ಮಾಡಿ ಲೋಕಾಯುಕ್ತ ತೀರ್ಪು ಪಡೆದುಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿಯ ಮೇಲೆ ದ್ವೇಷ ಸಾಧಿಸುವ ಸಲುವಾಗಿ ಸುಳ್ಳು ದೂರುಗಳನ್ನು ನೀಡುತ್ತಿದ್ದೆ ಎಂಬ ಬಗ್ಗೆ ಹಾಗೂ ಅವರನ್ನು ಧರ್ಮದರ್ಶಿ ಸ್ಥಾನದಿಂದ ಕಾನೂನು ಬಾಹಿರವಾಗಿ ಕಿತ್ತುಹಾಕಿದ್ದೇನೆಂದು ಆರೋಪಿಯು ನನ್ನ ವಿರುದ್ಧ ಮೈಸೂರಿನ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 2/2016ರಂತೆ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಆರೋಪಿಯು ಅಸಲು ದಾವೆ ಸಂಖ್ಯೆ 2/2016ರಂತೆ ನನ್ನ ವಿರುದ್ಧ ಹೂಡಿದ್ದಾರೆಂದರೆ ಸರಿ. ಸಾಕ್ಷಿಯು ಮುಂದುವರಿದು ಈ ನ್ಯಾಯಾಲಯದಲ್ಲಿರುವ ಪ್ರಕರಣದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿಯು ಸದರಿ ದಾವೆಯನ್ನೂ ಸಹ ನನ್ನ ವಿರುದ್ಧ ಹೂಡಿರುತ್ತಾರೆಂದು ಸ್ವಯಂ ನುಡಿದಿರುತ್ತಾರೆ. ಅಸಲು ದಾವೆ ಸಂಖ್ಯೆ 2/2016 ನೊಂದಾವಣೆಯಾಗುವ ಪೂರ್ವದಲ್ಲಿ ಮಿಸ್ ಸಂಖ್ಯೆ 218/2011 ಎಂದು ದಾಖಲಾಗಿತ್ತು ಎಂದರೆ ಸರಿ. ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಮಿಸ್ ಸಂಖ್ಯೆ 218/2011 ದಾಖಲಾದ ನಂತರ ಆರೋಪಿಯ ವಿರುದ್ಧ ಹಣ ದುರುಪಯೋಗದ ಬಗ್ಗೆ ಬೈಲಕುಪ್ಪೆ ಪೋಲೀಸ್ ಠಾಣೆಯಲ್ಲಿ ನಾನು ದೂರು ಕೊಟ್ಟಿದ್ದೆ ಎಂದರೆ ಸರಿ. ಸದರಿ ದೂರಿನಲ್ಲಿ ಆರೋಪಿಯು ಒಟ್ಟು 15,88,212/-ರೂಪಾಯಿ ಹಣವನ್ನು

ದುರುಪಯೋಗಪಡಿಸಿಕೊಂಡಿದ್ದಾರೆಂದು ದೂರು ಕೊಟ್ಟಿದ್ದೆ ಎಂದರೆ ಸರಿ. ಸದರಿ ದೂರಿನಲ್ಲಿ ಆರೋಪಿಯು ಶಾಲಾ ಶುಲ್ಕ ಸಂಗ್ರಹಣೆಯಲ್ಲಿ 6,81,962/- ರೂಪಾಯಿಗಳನ್ನು ಯಾವುದೇ ರಸೀದಿಗಳನ್ನು ನೀಡದೆ ದುರುಪಯೋಗಪಡಿಸಿಕೊಂಡಿದ್ದಾರೆಂದು, ಕಾರ್ಡ್ ಸಂಸ್ಥೆಯವರಿಂದ 1,51,250/- ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು, ಶ್ರೀ ಧರ್ಮರವರಿಂದ 1,05,000/- ರೂಪಾಯಿಗಳನ್ನು ಪಡೆದು ದುರುಪಯೋಗಪಡಿಸಿಕೊಂಡಿದ್ದಾರೆಂದು ಮತ್ತು ಶಾಲಾ ಜಮೀನಿನಲ್ಲಿ ಬೆಳೆದಂತಹ ಜೋಳ, ಶುಂಠಿ ಪಸಲನ್ನು ಮಾರಿ ಬಂದ ಹಣವನ್ನು ಆರೋಪಿಯು ದುರುಪಯೋಗಪಡಿಸಿಕೊಂಡಿದ್ದಾರೆಂದು ನಾನು ದೂರಿನಲ್ಲಿ ಆರೋಪ ಮಾಡಿದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆರೋಪಿಯು ಕಾರ್ಡ್ ಸಂಸ್ಥೆಯಿಂದ ದುರುಪಯೋಗ ಪಡಿಸಿಕೊಂಡ ಹಣವನ್ನು ದೂರಿನಲ್ಲಿ 1,31,250/- ರೂಪಾಯಿ ಎಂದು ನಮೂದಾಗುವ ಬದಲು 1,51,250/- ಎಂದು ಬೆಳಚ್ಚು ತಪ್ಪಿನಿಂದ ತಪ್ಪಾಗಿ ನಮೂದಾಗಿರುತ್ತದೆ ಎಂದು ಸಾಕ್ಷಿಯು ಸ್ವಯಂ ನುಡಿದಿರುತ್ತಾರೆ.

ಕಾರ್ಡ್ ಸಂಸ್ಥೆಗೆ ಶ್ರೀಮತಿ ಸಮಂತಕಾ ಡೇವಿಡ್ ಕೋಂ ರಾಯ್ ಡೇವಿಡ್‌ರವರು ಮುಖ್ಯಸ್ಥರು ಎಂದರೆ ಸರಿ. ನಾನು ಪೋಲೀಸರಿಗೆ ದೂರು ಕೊಟ್ಟ ನಂತರ ಪೋಲೀಸ್ ತನಿಖಾಧಿಕಾರಿಯವರು ನನ್ನನ್ನು, ಸಮಂತಕಾ ಡೇವಿಡ್, ಧರ್ಮ, ಎಸ್.ಎಂ.ಅಸ್ರಫ್, ಸುರೇಶ್‌ಕುಮಾರ್, ಜಲಜಾಕ್ಷಿ, ಸುಲೋಚನ, ಗೀತಾ, ಹೇಮಾವತಿ ಮತ್ತು ಸಿಂಗ್ರಯ್ಯನ ಮಗ ಚೆನ್ನಯ್ಯರವರನ್ನು ವಿಚಾರಣೆ ಮಾಡಿದ್ದಾರೆಂದರೆ ಸರಿ. ಸಮಂತಕ ಡೇವಿಡ್‌ರವರು ಪೋಲೀಸರ ಮುಂದೆ ಹೇಳಿಕೆ ಕೊಡುವಾಗ ಕಾರ್ಡ್‌ಸಂಸ್ಥೆಯವರು ನೀಡಿರುವ ಕೊಡುಗೆಗಳನ್ನು ಮಿಳಿಂದ ಶಾಲಾ ಸಂಸ್ಥೆಗೆ ನೀಡಿದ್ದಾರೆಯೇ ಹೊರತು ಆರೋಪಿಗೆ ಯಾವುದೇ ಹಣ ನೀಡಿಲ್ಲ ಹಾಗೂ ಆರೋಪಿಯು ದುರುಪಯೋಗಪಡಿಸಿಕೊಂಡಿಲ್ಲವೆಂದು ಹೇಳಿಕೆ ನೀಡಿದ್ದಾರೆ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಆ ರೀತಿ ಹೇಳಿಕೆ ನೀಡಿದ್ದಾರೆ ಆದರೆ ಆರೋಪಿಯೇ ಆ ರೀತಿ ಹೇಳಿ ಬರೆಸಿರುತ್ತಾರೆ ಎಂದು ನುಡಿದಿರುತ್ತಾರೆ. ಧರ್ಮ ರವರು ಸಹ ಪೋಲೀಸರ ಮುಂದೆ ಹೇಳಿಕೆ ಕೊಡುವಾಗ ಧರ್ಮರವರು ಆರೋಪಿಯ ಕೈಗೆ ಯಾವುದೇ ಹಣ ನೀಡಿರುವುದಿಲ್ಲವೆಂದು ಮತ್ತು ಆರೋಪಿಯು ಯಾವುದೇ ಹಣವನ್ನು ದುರುಪಯೋಗ ಮಾಡಿಕೊಂಡಿಲ್ಲವೆಂದು ಹೇಳಿಕೆ ನೀಡಿರುತ್ತಾರೆಂದರೆ ಸರಿಯಲ್ಲ. ಧರ್ಮರವರು ಪೋಲೀಸ್ ತನಿಖಾಧಿಕಾರಿ ಮುಂದೆ ಏನು ಹೇಳಿಕೆ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ.

ಅಸ್ರಫ್, ಜಲಜಾಕ್ಷಿ, ಸುರೇಶ್‌ಕುಮಾರ, ಸುಲೋಚನ, ಗೀತಾ, ಹೇಮಾವತಿ ರವರುಗಳೂ ಕೂಡ ಆರೋಪಿಯು ಯಾವುದೇ ಹಣ ದುರುಪಯೋಗಪಡಿಸಿಕೊಂಡಿಲ್ಲವೆಂದು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಆರೋಪಿಯ ಶಡ್ಯಂತರದಿಂದ

ಪೊಲೀಸರು ಒತ್ತಾಯ ಪೂರ್ವಕವಾಗಿ ಪಡೆದಿರುವಂತಹ ಹೇಳಿಕೆಗಳಾಗಿರುತ್ತದೆ ಎಂದು ನುಡಿದಿರುತ್ತಾರೆ. ಮೇಲೆ ಹೇಳಿದ ವ್ಯಕ್ತಿಗಳನ್ನು ಭೇಟಿ ಮಾಡಿ ನೀವು ಆ ರೀತಿ ಹೇಳಿಕೆಗಳನ್ನು ಪೊಲೀಸರ ಮುಂದೆ ಕೊಟ್ಟಿದ್ದೀರಾ ಎಂದು ನಾನು ಸದರಿ ವ್ಯಕ್ತಿಗಳನ್ನು ಕೇಳಿರುವುದಿಲ್ಲ. ಶಾಲಾ ಆವರಣದಲ್ಲಿ ಸಪೋಟ, ಶುಂಠಿ ಹಾಗೂ ಜೋಳದ ಪಸಲನ್ನು ಸಿಂಗ್ರಯ್ಯನ ಮಗ ಚಿನ್ನಯ್ಯ ಬೆಳೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಶಾಲಾ ಆವರಣದಲ್ಲಿ ಸಪೋಟ, ಶುಂಠಿ ಹಾಗೂ ಜೋಳದ ಬೆಳೆಯನ್ನು ಆರೋಪಿಯೇ ಬೆಳೆಯುತ್ತಿದ್ದರು. 1990 ರಿಂದ 2006ರವರೆಗೆ ಆರೋಪಿಯು ಶಾಲಾ ಆವರಣದಲ್ಲಿ ಮೇಲೆ ಹೇಳಿದ ಬೆಳೆಗಳನ್ನು ಬೆಳೆಯುತ್ತಿದ್ದರು.

1990 ರಿಂದ 2006ರವರೆಗೆ ಧರ್ಮದರ್ಶಿ ಸಮಿತಿಯವರು ಸುಮಾರು 100 ಬಾರಿ ಸಭೆಗಳನ್ನು ನಡೆಸಿದ್ದೀರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಖಚಿತವಾಗಿ 100 ಸಭೆಗಳಲ್ಲ ಅನೇಕ ಸಭೆಗಳನ್ನು ನಡೆಸಿದ್ದೇವೆಂದು ನುಡಿದಿರುತ್ತಾರೆ. ಆರೋಪಿಯು ಬೆಳೆಯನ್ನು ಬೆಳೆದು ಬಂದ ಆದಾಯವನ್ನು ಮಿಳಿಂದ ವಿದ್ಯಾ ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮೂ ಮಾಡುವಂತೆ ಸಭೆಯಲ್ಲಿ ಕೇಳಿ ಠರಾವು ಪಾಸುಮಾಡಿದ್ದೀರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಠರಾವು ಪಾಸು ಮಾಡಿಲ್ಲ ಆದರೆ ಆ ಭೂಮಿಯಲ್ಲಿ ಬೆಳೆದ ಪಸಲಿನಿಂದ ಬಂದ ಆದಾಯವನ್ನು ಶಾಲೆಯ ಚಟುವಟಿಕೆಗೆ ಬಳಸುತ್ತಿದ್ದೇನೆಂದು ಆರೋಪಿಯೇ ಸದರಿ ಸಭೆಗಳಲ್ಲಿ ತಿಳಿಸಿರುತ್ತಾರೆಂದು ನುಡಿದಿರುತ್ತಾರೆ. ಆರೋಪಿಯು ಬೆಳೆಯಿಂದ ಬಂದ ಆದಾಯವನ್ನು ಶಾಲಾ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದೇನೆಂದು ಹೇಳಿದ ಬಗ್ಗೆ ಠರಾವು ಪುಸ್ತಕದಲ್ಲಿ ನಮೂದಾಗಿದೆಯೇ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಠರಾವು ಪುಸ್ತಕದಲ್ಲಿ ನಮೂದಾಗಿಲ್ಲ ಆದರೆ ಆರೋಪಿಯೇ ಪಸಲುಗಳಿಂದ ಇಷ್ಟು ಹಣ ಬಂದಿದೆ ಎಂದು ಆಡಿಟ್‌ನವರಿಗೆ ಮಾಹಿತಿ ನೀಡಿದ್ದಾರೆಂದು ನುಡಿದಿರುತ್ತಾರೆ. ಆರೋಪಿಯು ಶಾಲಾ ಆವರಣದಲ್ಲಿ ಬೆಳೆಗಳನ್ನು ಬೆಳೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಸಮಯ ಮದ್ಯಾಹ್ನ 2.00 ಗಂಟೆ ಆದ್ದರಿಂದ ಸಾಕ್ಷಿಯ ಮುಂದುವರಿದ ಪಾಟೀಸವಾಲನ್ನು ಮದ್ಯಾಹ್ನ 2.45ರವರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

11-02-20

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.

ಇಂದು ದಿ:11.02.2020 ರಂದು ಸಾಕ್ಷಿಯನ್ನು ಮದ್ಯಾಹ್ನ 3.55 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿಕೆಎಂ ವಕೀಲರಿಂದ ಃ

ಶಾಲಾ ಆವರಣದಲ್ಲಿ ಆರೋಪಿಯು ಬೆಳೆ ಬೆಳೆದು ಬಂದ ಆದಾಯವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1992 ರಿಂದ 2009ರವರೆಗೆ ಶಾಲಾ ಆವರಣದಲ್ಲಿ ಬೆಳೆದ ಹಣ್ಣಿನ ಪಸಲಿನಿಂದ, ಜೋಳ ಮತ್ತು ಶುಂಠಿಯಿಂದ ಬಂದ ಆದಾಯವನ್ನು ಶಾಲೆಯ ಅಭಿವೃದ್ದಿಗೆ ಬಳಸಿಕೊಳ್ಳಲಾಗಿದೆ ಎಂದು ಆಡಿಟ್ ವರದಿಯಲ್ಲಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆದರೆ ಆರೋಪಿಯು ಪಸಲಿಗೆ ರಸೀದಿಕೊಟ್ಟಿಲ್ಲ ಬ್ಯಾಂಕಿಗೆ ಹಣ ಜಮಾ ಮಾಡಿಲ್ಲವೆಂದು ಸ್ವಯಂ ನುಡಿಯುತ್ತಾರೆ. ಶಾಲಾ ಆವರಣದಲ್ಲಿ ಬೆಳೆದ ಬೆಳೆಯ ಆದಾಯದ ಬಗ್ಗೆ ಲೆಕ್ಕ ಇಡುವುದು, ರಸೀದಿಗಳನ್ನು ನಿರ್ವಹಿಸುವುದು ಹಾಗೂ ಬ್ಯಾಂಕಿಗೆ ಹಣ ಜಮಾ ಮಾಡುವ ಕೆಲಸವನ್ನು ಆರೋಪಿಗೆ ವಹಿಸಿದ ಬಗ್ಗೆ ದಾಖಲಾತಿ ಇಲ್ಲ. ಸಾಕ್ಷಿಯು ಮುಂದುವರಿದು ಸಂಸ್ಥೆಯ ಶಾಲಾ ಚಟುವಟಿಕೆಗಳನ್ನು ಆರೋಪಿಯೇ ನಿರ್ವಹಣೆ ಮಾಡುತ್ತಿದ್ದರಿಂದ ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾಗಿದ್ದ ಜವಾಬ್ದಾರಿ ಆರೋಪಿಯದ್ದೇ ಆಗಿರುತ್ತದೆ ಎಂದು ಸ್ವಯಂ ನುಡಿಯುತ್ತಾರೆ. ಆರೋಪಿಗೆ ಮೇಲ್ಕಂಡ ಜವಾಬ್ದಾರಿಯನ್ನು ವಹಿಸಲಾಗಿತ್ತೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಚಿನ್ನಯ್ಯ ಬಿನ್ ಸಿಂಗ್ರಯ್ಯರವರು ಶಾಲಾ ಆವರಣದಲ್ಲಿ ಇರುವ ಬೆಳೆಗಳನ್ನು ತೆಗೆದುಕೊಂಡು ಹೋಗಬಾರದು ಎಂದು ಜಿಲ್ಲಾ ಪಂಚಾಯತಿಗೆ ದೂರು ಕೊಡಲಾಗಿತ್ತು ಎಂದರೆ ಸರಿ. ಜಿಲ್ಲಾ ಪಂಚಾಯತಿಯಲ್ಲಿ ವಿಚಾರಣೆ ನಡೆದು 7000/- ರೂಪಾಯಿಯನ್ನು ಚಿನ್ನಯ್ಯ ಠೇವಣಿ ಇಟ್ಟು ಬೆಳೆ ತೆಗೆದುಕೊಂಡು ಹೋಗಬಹುದು ಎಂದು ಆದೇಶವಾಗಿತ್ತು ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಆರೋಪಿಯಾದ ದೊಡ್ಡಣ್ಣ ಸದರಿ 7000/- ರೂಪಾಯಿಯನ್ನು ಠೇವಣಿ ಇಟ್ಟರು ಎಂದು ನುಡಿದಿರುತ್ತಾರೆ. ಚಿನ್ನಯ್ಯ ಬಿನ್ ಸಿಂಗ್ರಯ್ಯರವರು ಜಿಲ್ಲಾ ಪಂಚಾಯತಿಯಲ್ಲಿ 7000/-ರೂಪಾಯಿ ಹಣವನ್ನು ಠೇವಣಿ ಇಟ್ಟರು ಎಂದರೆ ಸರಿಯಲ್ಲ. ಸದರಿ 7000/- ರೂಪಾಯಿ ಠೇವಣಿ ಹಣವನ್ನು ನಾನು ಚಿನ್ನಯ್ಯನವರಿಗೆ ಮರುಪಾವತಿ ಮಾಡಬೇಕಿತ್ತೆಂದು ಪೋಲೀಸರ ಮುಂದೆ ಚಿನ್ನಯ್ಯರವರು ಹೇಳಿಕೆ ನೀಡಿದ್ದಾರೆ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಅದು ಚಿನ್ನಯ್ಯನಿಗೆ ಸಂಬಂಧಪಟ್ಟಿದ್ದಲ್ಲ ಎಂದು ನುಡಿದಿರುತ್ತಾರೆ. ಶಾಲಾ ಆವರಣದಲ್ಲಿ ಬೆಳೆ ಬೆಳೆಯಲು ಶಾಲಾ ಆಡಳಿತ ಮಂಡಳಿಯವರಾದ ನಾವುಗಳೇ ಚಿನ್ನಯ್ಯ ಬಿನ್ ಸಿಂಗ್ರಯ್ಯರವರಿಗೆ ಅವಕಾಶ ಮಾಡಿಕೊಟ್ಟಿದ್ದೆವು ಎಂದರೆ ಸರಿಯಲ್ಲ.

11.02.20

ಶಾಲೆಯ ಆವರಣದಲ್ಲಿ ಬೆಳೆದ ಬೆಳೆಯ ಪಸಲಿನಿಂದ ಸಂಸ್ಥೆಗೆ ಬರಬೇಕಾದ ಹಣ 6,50,000/- ಆಗಿತ್ತು ಎಂದು ನಾನು ನನ್ನ ಪಿರ್ಯಾದಿನಲ್ಲಿ ನಮೂದಿಸಿದ್ದೇನೆಂದರೆ ಸರಿ. ಸದರಿ 6,50,000/- ರೂಪಾಯಿ ಹಣ 1994 ರಿಂದ 2009ರ ವರೆಗೆಗಿನ ಅವಧಿಗೆ ಸಂಬಂದಪಟ್ಟರುತ್ತದೆ. 1994 ರಿಂದ 2009ರವರೆಗೆ ಪ್ರತಿ ವರ್ಷ ಎಷ್ಟೆಷ್ಟು ಹಣ ಬೆಳೆಯಿಂದ ಶಾಲಾ ಆಡಳಿತ ಮಂಡಲಿಗೆ ಬರಬೇಕಾಗಿತ್ತು ಎಂದು ನನಗೆ ಹೇಳಲಾಗುವುದಿಲ್ಲ, ಆದರೆ ಸಾಕ್ಷಿಯು ಮುಂದುವರಿದು ಶಾಲಾ ಆಡಳಿತ ಮಂಡಳಿಯವರು ಅಸೆಸ್ ಮಾಡಿ 6,50,000/- ರೂಪಾಯಿ ಬೆಳೆಯ ಪಸಲಿನಿಂದ ಬರಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆರೋಪಿಯಿಂದ ಬೆಳೆ ಪಸಲಿಗೆ ಸಂಬಂಧಿಸಿದ 6,50,000/- ರೂಪಾಯಿ ಹಣವು ಶಾಲಾ ಸಂಸ್ಥೆಗೆ ಬರಬೇಕಾಗಿತ್ತು ಎಂಬ ಬಗ್ಗೆ ದಾಖಲಾತಿ ಇದೆ. ದಿನಾಂಕ 22.08.2010ರಂದು ದರ್ಮದರ್ಶಿಗಳ ಸಭೆಯಲ್ಲಿ ಅಸೆಸ್ ಮಾಡಿ ದಾಖಲೆಯಲ್ಲಿ ನಮೂದು ಮಾಡಲಾಗಿದೆ. ಯಾವ ದಾಖಲಾತಿ ಆಧಾರದ ಮೇಲೆ ಧರ್ಮದರ್ಶಿಗಳ ಸಭೆಯಲ್ಲಿ ಅಸೆಸ್ ಮಾಡಲಾಯಿತು ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬರಹ ರೂಪದ ಆಧಾರದ ದಾಖಲೆ ಇಲ್ಲವೆಂದು ನುಡಿದು ಆರೋಪಿಯೇ ಇಂತಿಂತ ಬೆಳೆಗಳಿಂದ ಇಷ್ಟಿಷ್ಟು ಆದಾಯ ಬಂದಿದೆ ಎಂದು ಆಡಿಟರ್‌ಗೆ ಮಾಹಿತಿ ಸಲ್ಲಿಸಿದ್ದು ಆ ಮಾಹಿತಿಗಳನ್ನು ಪರಿಶೀಲಿಸಿ ಆರೋಪಿ ಕೊಟ್ಟ ಮಾಹಿತಿ ಸರಿಯಾಗಿಲ್ಲವೆಂದು ತೀರ್ಮಾನಿಸಿ ಒಟ್ಟು 6,50,000/- ಸಂಸ್ಥೆಗೆ ಆರೋಪಿಯಿಂದ ಬರಬೇಕಾಗಿದೆ ಎಂದು ಚರ್ಚಿಸಿ ತೀರ್ಮಾನಿಸಿ ಅನುಮೋದಿಸಲಾಯಿತು ಎಂದು ನುಡಿದಿರುತ್ತಾರೆ.

1994 ರಿಂದ 2009ರವರೆಗೆ ಆಡಿಟ್ ಮಾಡಿಸಲಾಗಿದೆಯೇ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿ ಕೊಟ್ಟ ಮಾಹಿತಿಯ ಆಧಾರದ ಮೇಲೆ ಆಡಿಟ್ ಮಾಡಿಸಲಾಗಿದೆ ಎಂದು ನುಡಿದಿರುತ್ತಾರೆ. ಆಡಿಟ್ ವರದಿಯನ್ನು ನಿಮ್ಮ ಧರ್ಮದರ್ಶಿಗಳ ಸಭೆಯಲ್ಲಿ ಮುಂದಿಡಲಾಗಿತ್ತಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. 1994-95 ರಿಂದ 2004-05 ರವರೆಗಿನ ಆಡಿಟ್ ನ್ನು ಒಂದೇ ಬಾರಿ ಮಾಡಿಸಲಾಗಿದ್ದು ಅದನ್ನು ಧರ್ಮದರ್ಶಿಗಳ ಸಭೆಯಲ್ಲಿ 2004-05 ರ ಆರ್ಥಿಕ ವರ್ಷದಲ್ಲಿ ಅನುಮೋದಿಸಲಾಯಿತು. 1994-95 ರಿಂದ 2004-05 ನೇ ಸಾಲಿನ ಆಡಿಟ್ ವರದಿಗಳಲ್ಲಿ ಆರೋಪಿತನು ಶಾಲಾ ಆವರಣದಲ್ಲಿ ಬೆಳೆದ ಬೆಳೆಯ ಆದಾಯ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ನಮೂದಿಲ್ಲ ಸಾಕ್ಷಿಯು ಮುಂದುವರಿದು ಆದರೆ ಆಡಿಟ್ ನವರು ಲೆಕ್ಕಪತ್ರಗಳು ಕ್ರಮ ಬದ್ಧವಾಗಿಲ್ಲವೆಂದು ವರದಿ ನೀಡಿರುತ್ತಾರೆಂದು ಸ್ವಯಂ ನುಡಿಯುತ್ತಾರೆ

ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗಾಗಿ ಕೇಸನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.